ದಿನಾಂಕ : 13-10-2022 ರಂದು ಸಾಕ್ಷಿದಾರರಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು ವಾದಿ ಪರ : ಶ್ರೀ ಕೆಎಸ್ ಎಸ್ , ವಕೀಲರಿಂದಃ**

ನಾನು ಕೃಷಿ ಕೆಲಸ ಮಾಡುತ್ತಿದ್ದೇನೆ. ನಾನು ಹಾಗೂ ನನ್ನ ತಾಯಿ ಕರುವಾನೆಯಲ್ಲಿ ವಾಸವಿದ್ದೇವೆ. ನನ್ನ ಹೆಂಡತಿ ಹಾಗೂ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಶೃಂಗೇರಿಯಲ್ಲಿ ವಾಸವಿದ್ದಾರೆ. ನನ್ನ ಆಧಾರ್ ಕಾರ್ಡ್ ಹಾಗೂ ಚುನಾವಣಾ ಗುರುತಿನ ಚೀಟಿಯಲ್ಲಿ ಶೃಂಗೇರಿಯ ವಿಳಾಸ ನಮೂದಾಗಿರುತ್ತದೆ.

ಈ ಹಿಂದೆ ನಾನು ತೋಟದಲ್ಲಿ ಕೆಲಸ ಮಾಡುತ್ತಿದ್ದೆ ಹಾಗೂ ಈಗ್ಗೆ ನಾನು ಹಾಸ್ಟೆಲ್ ನಲ್ಲಿ 20 ವರ್ಷಗಳಿಂದ ಹಾಸ್ಟೆಲ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಶೃಂಗೇರಿಯ ಸಮಾಜ ಕಲ್ಯಾಣ ಹಾಸ್ಟೆಲ್ ನಲ್ಲಿ ಅಡಿಗೆ ಕೆಲಸ ಮಾಡುತ್ತಿದ್ದೇನೆ. ನಾನು ಸರ್ಕಾರಿ ಉದ್ಯೋಗಿ ಎಂದರೆ ಸರಿ.

ನನ್ನ ಪ್ರಮಾಣ ಪತ್ರದಲ್ಲಾಗಲೀ, ಜಿಪಿಎಯಲ್ಲಾಗಲೀ ಎಲ್ಲೂ ಕೂಡಾ ನಾನು ಸರ್ಕಾರಿ ಉದ್ಯೋಗಿ ಎಂದು ಹೇಳಿರುವುದಿಲ್ಲ ಎಂದರೆ ಕಣ್ತಪ್ಪಿನಿಂದ ನಮೂದಿಸಿರುವುದಿಲ್ಲ. ನಾನು ಸರ್ಕಾರಿ ಉದ್ಯೋಗಿ ಎಂದು ನನ್ನ ವಕೀಲರಿಗೆ ತಿಳಿಸಿರುತ್ತೇನೆ.

ನನ್ನ ತಂದೆ - ತಾಯಿಗೆ ನಾವು ಇಬ್ಬರು ಮಕ್ಕಳು, ನಾನು ಹಾಗೂ ನನ್ನ ಅಣ್ಣ. ನನ್ನ ಅಣ್ಣ ಹಿಂಬ್ರವಳ್ಳಿಯಲ್ಲಿ ಕೃಷಿಯನ್ನು ಮಾಡುತ್ತಿದ್ದಾರೆ.

ಶೃಂಗೇರಿಯಲ್ಲಿ ನನ್ನ ಹೆಸರಿನಲ್ಲಿ ಸ್ವಂತ ಮನೆಯಿದೆ. ಶಾನುವಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನನಗೆ ಸ್ವಂತ ಮನೆಯಿಲ್ಲ, ನನ್ನ ತಾಯಿಯ ಹೆಸರಿನಲ್ಲಿದೆ. ನನ್ನ ತಂದೆಯವರು ಸುಮಾರು 45 ವರ್ಷಗಳ ಹಿಂದೆ ಕರುವಾನೆಯಲ್ಲಿ ಮರಣ ಹೊಂದಿರುತ್ತಾರೆ.

ನನ್ನ ಕೃಷಿ ಜಮೀನು ಮೊದಲು ನನ್ನ ತಾಯಿಯವರ ಹೆಸರಿನಲ್ಲಿತ್ತು, ಈಗ ನನ್ನ ಹೆಸರಿನಲ್ಲಿ ಮಾಡಿರುತ್ತಾರೆ. ನನ್ನ ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ದಾವಾಸ್ವತ್ತು ಯಾವ ಗ್ರಾಮದ ಹಾಗೂ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದುನಮೂದು ಮಾಡಿರುವುದಿಲ್ಲ

ಎಂದರೆ ನಮೂದು ಮಾಡಿರುತ್ತೇನೆ, ಸರ್ವೆ ನಂಬರ್ 223 ಹಾಗೂ 137 ಎಂದು ನಮೂದಿಸಿರುತ್ತೇನೆ. ನನ್ನ ಮನೆ ಎರಡೂ ಸರ್ವೆ ನಂಬರ್ ಗಳಲ್ಲಿ ಬರುತ್ತದೆ ಅರ್ಧ ಮನೆ 223 ರಲ್ಲಿ ಹಾಗೂ ಉಳಿದ ಅರ್ಧ ಮನೆ 137 ರಲ್ಲಿ ಬರುತ್ತದೆ. ನನ್ನ ಮನೆ ವಿಸ್ತೀರ್ಣ 60X 40 ಇದೆ, 20X20 ಅಂದಾಜು ಸರ್ವೆ ನಂಬರ್ 137 ರಲ್ಲಿ ಹಾಗೂ 20X20 ಅಂದಾಜು ಸರ್ವೆ ನಂಬರ್ 223 ರಲ್ಲಿ ಬರುತ್ತದೆ. ಈ ರೀತಿ ಎರಡೂ ಸರ್ವೆ ನಂಬರ್ ಗಳಲ್ಲಿ ನನ್ನ ಮನೆ ಬರುತ್ತದೆ ಎಂದು ನನ್ನ ವಾದ ಪತ್ರದಲ್ಲಿ ಅಥವಾ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರ್ವೆ ಆಗದೇ ಇರುವುದರಿಂದ ಸದರಿ ಮಾಹಿತಿಯನ್ನು ನಮೂದಿಸಲು ಆಗಿರುವುದಿಲ್ಲ. ಸದರಿ ದಾವೆಯನ್ನು ಹಾಕುವ ಸಮಯದಲ್ಲಿ ನನ್ನ ಮನೆ ನಿರ್ದಿಷ್ಟವಾಗಿ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ವಾದ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿಯನ್ನು ಸರ್ಕಾರಿ ಸರ್ವೆಯರ್ ಅವರು ಹೇಳಿರುವ ಆಧಾರದ ಮೇಲೆ ನಮೂದಿಸಿರುತ್ತೇನೆ. ಆ ರೀತಿ ಸರ್ಕಾರಿ ಸರ್ವೆಯರ್ ಅವರು ನೀಡಿರುವ ನಕ್ಷೆ ಹಾಗೂ ವರದಿ ನನ್ನ ಹತ್ತಿರ ಇವೆ, ಅವುಗಳನ್ನು ತಂದು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಬಹುದು.

ನನ್ನ ಮನೆಯ ಅರ್ಧ ಭಾಗ ಸರ್ವೆ ನಂಬರ್ 137 ರ ಪಶ್ಚಿಮ ದಿಕ್ಕಿಗೆ ಬರುತ್ತದೆ. ನನ್ನ ಮನೆಯ ಅರ್ಧ ಭಾಗ ಸರ್ವೆನಂಬರ್ 223 ರ ಪೂರ್ವ ದಿಕ್ಕಿಗೆ ಬರುತ್ತದೆ.

ದಾವಾ ಸ್ವತ್ತಿನ ಪೂರ್ವ ದಿಕ್ಕಿನಲ್ಲಿ ಕಾಡು ಹಾಗೂ ಸರ್ವೆ ನಂಬರ್ 223 ಬರುತ್ತದೆ. ಪಶ್ಚಿಮ ದಿಕ್ಕಿನಲ್ಲಿ ಗ್ರಾಮ ಪಂಚಾಯಿತಿ ರಸ್ತೆ ಬರುತ್ತದೆ.

ನಾನು ಹಾಜರುಪಡಿಸಿರುವ ನಿಪಿ.4 ಮತ್ತು 5 ರ ಭಾವಚಿತ್ರಗಳಲ್ಲಿ ಯಾವುದೇ ರಸ್ತೆಗಳು ಕಾಣುತ್ತಿಲ್ಲ ಎಂದರೆ ನಾವು ಮನೆಯ ಪೋಟೋ ಕೊಟ್ಟಿರುತ್ತೇವೆ, ರಸ್ತೆಯ ಪೋಟೋ ಕೊಟ್ಟಿರುವುದಿಲ್ಲ. ನಿಪಿ.4 ಮತ್ತು 5 ರ ಎಡ, ಬಲ , ಮುಂದೆ ಹಾಗೂ ಹಿಂದೆ ಎಲ್ಲಾ ಕಡೆಗಳಲ್ಲೂ ಕಾಡು ಕಾಣುತ್ತಿದೆ ಎಂದರೆ ನಾವು ಬೇರೆ ಬೇರೆ ಜಾತಿಯ ಗಿಡಮರಗಳನ್ನು ನೆಟ್ಟಿರುತ್ತೇವೆ. ನಿಪಿ.4 ಮತ್ತು 5 ಭಾವಚಿತ್ರಗಳಲ್ಲಿ ಗಿಡಮರಗಳನ್ನು ಹೊರತುಪಡಿಸಿ ಯಾವುದೇ ರಸ್ತೆ ಕಾಣಿಸುತ್ತಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನಾವು ಮನೆಯ ಭಾವಚಿತ್ರಗಳನ್ನು ಮಾತ್ರ ಹಾಜರುಪಡಿಸಿರುತ್ತೇವೆ ಎನ್ನುತ್ತಾರೆ.

ದಾವಾಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಗ್ರಾಮ ಪಂಚಾಯಿತಿ ರಸ್ತೆ ಸುಮಾರು 20- 30 ಅಡಿ ದೂರದಲ್ಲಿದೆ. ಸದರಿ 20-30 ಅಡಿ ಜಾಗದಲ್ಲಿ ದನದ ಕೊಟ್ಟಿಗೆಯಿದೆ. ಸದರಿ ದನದ ಕೊಟ್ಟಿಗೆ ನನ್ನ ತಾಯಿ, ಡಾಕಮ್ಮನವರಿಗೆ ಸಂಬಂಧಿಸಿರುತ್ತದೆ. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ದನದ ಕೊಟ್ಟಿಗೆ ಬರುತ್ತದೆ ಎಂದು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ಮನೆಗೆ ಸಂಬಂಧಪಟ್ಟಂತೆ ಮಾತ್ರ ಈ ದಾವೆಯನ್ನು ಸಲ್ಲಿಸಿರುತ್ತೇನೆ. ನಿಪಿ.4 ರಿಂದ 6 ಭಾವಚಿತ್ರಗಳಲ್ಲಿ ದನದ ಕೊಟ್ಟಿಗೆ ಕಾಣಿಸುತ್ತಿಲ್ಲ ಎಂದರೆ ನಾವು ಮನೆಗೆ ಮಾತ್ರ ಈ ದಾವೆಯನ್ನು ಸಲ್ಲಿಸಿರುತ್ತೇವೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.)

(ದಿನಾಂಕ:13-10-2022 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಓ

ಸಹಿ/- xxx
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ